ಕೋಲಾರ ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 10ನೆ ಅಕ್ಟೋಬರ್ 1903ನೆ ಇಸವಿ.

ಸರ್ಕಾರಕ್ಕೆ ಬರಬೇಕಾದ ಬಾಕೀಗೋಸ್ಕರವಾಗಿ, ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಆಯಾಯ ತಾ॥ ಅಮಲ್ದಾರ್ರ ಕಛೇರಿಯಲ್ಲಿ, 1903ನೆ ಡಿಸೆಂಬರ್ ಮಾಹೆ 4ನೆ ತಾರೀಖಿನ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಮಾಲೂರು ತಾ॥ ನರಸಾಪುರದ ಹೋಬಳಿ ಜೋಡಿ ಮುತ್ತಕದ ಹಳ್ಳಿ ಗ್ರಾಮ.
ಕೋಲಾರ ತಾ॥ ಹುತ್ತೂರು ಹೋಬಳಿ ಖಾಯಂಗುತ್ತಾ ಪಾರೇ ಹೊಸಹಳ್ಳಿ ಗ್ರಾಮ.

(ಹೆಚ್ಚು ತಪಶೀಲ್ ಬಗ್ಗೆ 22ನೆ ಮರ್ಕುಂ 41ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 526—525ನೆ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್, ಡೆಪ್ಯೂಟಿ ಕಮಿಷನರ್.

ನೋಟಿಸ್.

ಬೆಂಗಳೂರು ರೇಂಜ್ ಅ॥ ಕ॥ ಕಛೇರಿಯಿಂದ.

ತಾರೀಖು 14ನೆ ಅಕ್ಟೋಬರ್ 1903.

ಹೆಸರಘಟ್ಟದ ಕೆರೆ ಒಡಾವಣೆಗಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಟ್ಟ ಜಮೀನುಗಳಿಗೆ ಕಂಪನ್ಸೇಷನ್ ಠರಾವಾಗಲ್ಪಟ್ಟು ಇದರಿಂದ ಕಂಡ ಮೂರು ಕೇಸುಗಳು ಶಿವಾಯಿ ಬಾಕಿ ಎಲ್ಲಾ ಕೇಸುಗಳ ವಿಚಾರ ವೆಗೈ ಆಗಿರುತ್ತೆ. ಸದರಿ 3 ಕೇಸುಗಳ ಪೈಕಿ ಬಂದು ಕೇಸ್‌ನಲ್ಲಿ ಮೂಲೀಕರು ಪೊಬಲಗು ತೆಗದುಕೊಳ್ಳದೇಲು ನಿಂತ ಎರಡು ಕೇಸ್‌ಗಳಲ್ಲಿ ಮೂಲೀಕರು ಇರತಕ್ಕ ಸ್ಥಳ ಗೊತ್ತು ಇಲ್ಲದೆ ಇರುತ್ತೆ. ಈ ಕಾರಣದಿಂದ ಇಸ್ತಿಹಾರ್ ಗೆಜಟ್ಟಿನಲ್ಲಿ ಘೋಷಿಷ್ ಮಾಡಿರುತ್ತೆ. ಇಸ್ತಿಹಾರ್ ಘೋಷಿಷ್ ಆದ ತಾರೀಖು ಲಾಗಾಯಿತು (3) ಮೂರು ತಿಂಗಳು ವಳಗಾಗಿ ಮೂಲೀಕರೆ ಆಗಲಿ ಅಥವಾ ಅವರಿಗೆ ಸಂಬಂಧಪಟ್ಟವರೆ ಆಗಲಿ ತಮ್ಮಲ್ಲಿ ಇರತಕ್ಕ ದಾಖಲೆ ನಿಶಿ ಬೆಂಗಳೂರು ವೊಕ್ಕಾಂ ನವ್ಮ ಕಛೇರಿ ರೂಬರೂ ಹಾಜರಾಗಿ ಅವರ ಹಕ್ಕನ್ನ ಸ್ಥಿರಪಡಿಶಿಕೊಟ್ಟು ವೊಬಲಗನ್ನ ಪಡದುಕೊಳ್ಳಬಹುದು. ತಪ್ಪಿದರೆ ವೊಬಲಗನ್ನ ಶಿವಾಯಿ ಜವೆಗೆ ದಾಖಲ್ಮಾಡಲ್ಪಡುತ್ತೆ ತಿಳಿಯುವದು.

1. ನೆಲಮಂಗಲ ತಾಲ್ಲೂಕು ಜೋಡಿ ಐವರಕಂಡಪುರ ಗ್ರಾಮದ ವನಮಲವೃತ್ತಿ ಬಾ॥ ಮೂಲಪುರುಷ ರಾಮಾಪಂಡಿತ, ಭೋಗ್ಯದಾರ ಮುತ್ತೂರು ಶೀನಪ್ಪ 1, ಡಿಟೋ ನರಸಾಪಂಡಿತ 1, ಇದರ ಬಗೆ ಕಂಪನ್ಸೇಷನ್ ವೊಬಲಗು 12 ರೂಪಾಯಿ.

2. ದೊಡ್ಡಬಳ್ಳಾಪುರ ತಾಲ್ಲೂಕು ಗೊಂದಿಹಳ್ಳಿ ಕೃಷ್ಣಾಚಾರ್ರ ಬಗೆ ಇನಾಂ $\frac{1}{3}$ ಹಿಸ್ಸೆ ವೊಬಲಗು ರೂ. 71—5—4 ಇನಾಂದಾರ್ರು ಇರತಕ್ಕ ಸ್ಥಳ ಪತ್ತೆಯಿಲ್ಲ.

3. ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕ ದೇವನಪುರ ಗ್ರಾಮದ ಮುನಿವೆಂಕಟನ ಭಾವಿ ಮತ್ತು ಹುಣಿಶೆ ಮರಕ್ಕೆ ಸಲ್ಲಬೇಕಾದ ವೊಬಲಗು ರೂ. 66—0—0 ಇಸಂ ಇರತಕ್ಕ ಸ್ಥಳ ಗೊತ್ತು ಇಲ್ಲ.

ಬಿ. ಜೆ. ಕುಮಾರಸಾಮಿ ನಾಯಿಕ್
ಅಸಿಸ್ಟೆಂಟ್ ಕಮಿಷ

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 10ನೆ ಅಕ್ಟೋಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ, ಸರ್ಕಾರಿ ಕಣ್ಣಿ ಆಸ್ಪತ್ರೆ ಮತ್ತು ಪ್ರಸು ಆಸ್ಪತ್ರೆ ಇವುಗಳಲ್ಲಿ ಪ್ರತಿ ದಿವಸವೂ ಬೆಳ್ಗ್ಯೆ 7ರ ಲಾಗಾಯಿತು 10 ಘಂಟೆ ವರವಿಗೂ, ಮತ್ತು ಮಧ್ಯಾನ್ನ 4ರ ಲಾಗಾಯಿತು 5 ಘಂಟೆ ವರವಿಗೂ, ಹಾಫ್‌ಕಿನ್ಸ್ ಪ್ರೊಫೈಲಾಕ್ಟಿಕ್ ಯಾನೆ ಧೃತಿ ಮೂಲಕ, ಪ್ಲೇಗ್ ಜಾಡ್ಯ ತಗಲದೆ ಇರಲು, ಸ್ವಲ್ಪವೂ ಅಪಾಯವಿಲ್ಲದಂತೆ, ಇನಾಕ್ಯುಲೇಷನ್ ಮಾಡಲ್ಪಡುತ್ತೆ.

ಈಗ ವ್ಯಾಪಿಸಿರುವ ಪ್ಲೇಗ್ ಆಟಂಜಾಡ್ಯದಿಂದ ಇನಾಕ್ಯುಲೇಷನ್ ಮೂಲಕ ನಿರುಪಾಧಿಕತೆಯನ್ನು ಹೊಂದಲು ಕುತೂಹಲವುಳ್ಳವರೆಲ್ಲರೂ ಮೇಲಿ ಹೇಳಿರುವ ಆಸ್ಪತ್ರೆಗಳ ಛಾರ್ಜಿನಲ್ಲಿ ಇರುವ ಡಾಕ್ಟರುಗಳಲ್ಲಿ ಹೋಗಬಹುದು.

ಹೆಚ್. ಹೆಚ್. ಸ್ಪರ್ಕ್ಸ್,
ಪ್ರೆಸಿಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋ ಟಿ ಸ್ .

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ನಮೂದಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ವ್ಯಾಪಾರಗಳು ಬಿಕ್ರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಬಂದಕ್ಕೆ ನಾಲ್ಕು ಕಾಸುಗಳು:—

ಯೂರೋಪ್—ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್‌ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.